ಬಂದಿದೆಯಂತೆ! ಅದಕ್ಕೇ ಒಂದರ ಮೇಲೊಂದು ದುರ್ಘಟನೆಗಳು ನಡೀತಿವೆ. ಶನಿಮಹಾತ್ಮೆ ಆಡಿದರೆ ಆಯಪ್ಪನ ಸಿಟ್ಟು ತಣ್ಣಗಾಗುತ್ತೆ ಅಮ್ತ ಊರವರೆಲ್ಲ ಹೇಳ್ತಿದಾರೆ. ಬಾಬಣ್ಣಾರು ನಾಟಕ ಆಡಿ ಅಂದ್ರು. ನಿಮಗೆ ವಯಸ್ಸಾಯ್ತು, ಪೌರಾಣಿಕ ನಾಟಕ ಆಡಿಸೋರು ನಿಮಗೆ ಗೊತ್ತಿರ್ತಾರೆ, ಕೇಳಣ ಅಂತ ಬಂದ್ವಿ...' ಅಂತ ಅಂಗಡಿ ಶಿವರಾಜ ಹೇಳಿದ.

'ನಮ್ಮ ಹೈಸ್ಕೂಲು ಸಹಾಯಾರ್ಥ ನಾನೇ ರಾಜಾ ಸತ್ಯವ್ರತ ಆಡ್ಸಿದ್ದೆ. ಇನ್ನೊಂದ್ಸಲ ಶನಿಮಹಾತ್ಮೆನೂ ಆಡ್ಸಿದ್ದೆ. ನಂಗೆ ವಯಸ್ಸಾಯ್ತು ಅಂತ ಯಾರಂದರು? ಇನ್ನೂ ಗಟ್ಟಿಮುಟ್ಟಾಗೇ ಇದೀನಲ್ಲ. ಹಲ್ಲೂ ಗಟ್ಟಿಯಾಗವೆ. ಈಗ್ಲೂ ಗೋಟಡಿಕೇನ ಕಡ್ಲೇಬೀಜ ತಿಂದಂಗೆ ತಿಂತೀನಿ' ಅನ್ನುತ್ತ ಎದುರಿಗಿದ್ದ ಎಲಡಿಕೆ ತಟ್ಟೆಯಿಂದ ದುಂಡಡಿಕೆಯೊಂದನ್ನು ಎತ್ತಿಕೊಂಡು ಬಾಯಿಗೆಸೆದುಕೊಂಡು ಕಟ ಕಟ ಕಡಿದು ಲಲುವಿದರು. ಎಲೆಯೊಂದರ ಬೆನ್ನಿಗೆ ಸುಣ್ಣ ಸವರಿ ಮಡಿಸಿ ಬಾಯಿಗಿಟ್ಟುಕೊಂಡು ಜಗಿದು, ಜೊಲ್ಲು ಹೊರಕ್ಕೆ ಬೀಳದಂತೆ ಎಚ್ಚರವಹಿಸುತ್ತ, 'ಣಾಟಕ ಆಡದೇನೊ ಸರಿ. ಅದಕ್ಕೆ ಒಂದೂವರೆ ಳಕ್ಷ ಬೇಕು. ಳೇಡೀಸ್ ಪಾತ್ರಕ್ಕೆ ಹೊರಗಿಂದ ಕರೆಸಬೇಕು. ಇದು ದುಡ್ಡಿಣ ವಿಚಾರ...' ಎನ್ನುತ್ತ ಉತ್ಸಾಹದ ಮಾತಾಡಿದರು. ಆಮೇಲೆ ಅಂಗಳದ ಮೂಲೆಗೆ ಹೋಗಿ ಜೊಲ್ಲನ್ನಷ್ಟೇ ಉಗುಳಿ, ಶೇಷವನ್ನು ದವಡೆಗೆ ಒತ್ತರಿಸಿಕೊಳ್ಳುತ್ತ ಬಂದು, 'ಈಗ ಶನಿಮಹಾತ್ಮೆ ಯಾರು ನೋಡ್ತಾರೆ. ಎಲ್ಲರ ಮನೆಗೂ ಟೀವಿಗಳು ಬಂದವೆ' ಅನ್ನುತ್ತ ಹುಡುಗರ ಮುಖ ನೋಡಿದರು.

'ಶನಿಮಹಾತ್ಮೆ ಆಡ್ತೀವಿ ಅಂದ್ರೆ ನೋಡಲ್ಲ ಅಂಬೋ ಧೈರ್ಯ ಯಾರಿಗಿದೆ ಮೇಷ್ಟ್ರೇ? ನೀವು ಏನೇನೋ ಹೇಳಿ ನಮ್ಮ ಉತ್ಸಾಹ ಮುಕ್ಕು ಮಾಡಬಾರದು' ಅಂತ ಶಿವರಾಜ ಹೇಳಿದ. ಮೇಷ್ಟ್ರು ನಕ್ಕರು. ಎದ್ದು ನಿಂತ ಅವನು ಎಲಡಿಕೆ ತಟ್ಟೆಯಿಂದ ಎರಡು ಎಲೆ, ಮೂರ್ನಾಲ್ಕು ಅಡಿಕೆ ಎತ್ತಿಕೊಂಡು ಜೋಡಿಸಿ, ಜೇಬಿಂದ ಐನೂರರ ನೋಟು, ಮೇಲೊಂದು ರುಪಾಯಿ ನಾಣ್ಯ ತೆಗೆದು ಎಲಡಿಕೆ ಮೇಲಿಟ್ಟು ಊರವರ ಪರವಾಗಿ ನಿಮ್ಮನ್ನ ತಾಂಬೂಲ ಕೊಟ್ಟು ಕೇಳಿಕೊಳ್ತೀವಿ, ಊರಿನ ಅನಿಷ್ಟಗಳ ನಿವಾರಣೆಗೆ ಶನಿಮಹಾತ್ಮೆ ಸಂಗೀತ ನಾಟಕವನ್ನು ಆಡಿಸುವ ದೊಡ್ಡ ಮನಸ್ಸು ಮಾಡಬೇಕು ಅಂತ ನಾಟಕೀಯವಾಗಿ ಹೇಳಿ ಮೇಷ್ಟ್ರ ಕೈಗೆ ತಾಂಬೂಲ ಕೊಟ್ಟು ನಮಸ್ಕಾರ ಮಾಡಿದ.

ಮೂರ್ನಾಲ್ಕು ದಿನ ಕಳೆಯುವಷ್ಟರಲ್ಲಿ ಹೋಬಳಿಯ ಎಲ್ಲಾ ಊರುಗಳಲ್ಲೂ ಶನಿಮಹಾತ್ಮೆಯದೇ ಸುದ್ದಿ. ನಾಟಕಕ್ಕೆ ಮೂವರು ಲೇಡಿಸ್ ಕರೆಸ್ತಾರಂತೆ! ಮಹಾರಾಣಿ ಪಾತ್ರಕ್ಕೆ ಲಾಯಕ್ಕಾದೋಳು ನಮ್ಮ ತಾಲ್ಲೂಕಲ್ಲೇ ಇಲ್ಲ ಅಂತ ರಾಮಣ್ಣ ಮೇಷ್ಟ್ರು ತಲೆ ಕೆಡಿಸಿಕೊಂಡು ಕುಂತಿದ್ದಾರಂತೆ ಅಂತೆಲ್ಲ ಜನ ಮಾತಾಡಿಕೊಂಡರು.

ಮೇಷ್ಟ್ರು, ಮನೆಯ ಅಟ್ಟದ ಮೇಲ್ಲಿದ್ದ ಹಳೆಯ ಟ್ರಂಕಿನಿಂದ ರಾಜಾ ಸತ್ಯವ್ರತ ಮತ್ತು ಶನಿಮಹಾತ್ಮೆ ಎರಡೂ ನಾಟಕಗಳ ಹಸ್ತಪ್ರತಿಗಳನ್ನು ಹೊರತೆಗೆದು ದೂಳು ಕೊಡವಿದರು. ಎರಡೂ ನಾಟಕಗಳ ಕಥೆ ಒಂದೇ. ಕೆಲ ದೃಶ್ಯಗಳನ್ನು ಅದಲು ಬದಲು ಮಾಡಿ ಎರಡು ನಾಟಕ ಮಾಡಿದ್ದರು. ಅವನ್ನು ಬರೆದಾಗ ಮೇಷ್ಟ್ರಿಗೆ ಮೂವತ್ತರ ಪ್ರಾಯ. ನಾಟಕದ ಹಾಡುಗಳಿಗೆ ಅವರ ಆಪ್ತಮಿತ್ರ ಗೂಳ್ಯದ ಪಿಟೀಲು ಗೋವಿಂದಪ್ಪ ರಾಗ ಹಾಕಿದ್ದ. ತೆಲುಗು, ತಮಿಳು ಸಿನಿಮಾಗಳ ಟ್ಯೂನುಗಳನ್ನು ಅನಾಮತ್ತಾಗಿ ಎತ್ತಿಕೊಂಡು ಎಲ್ಲೋ ಕೇಳಿದ್ದೇವಲ್ಲ ಅನ್ನಿಸಿದರೂ ಮೂಲ ಪತ್ತೆ ಆಗದಂತೆ ಬಳಸಿದ್ದ! ಹಾಡುಗಳು ಮನೆಮಾತಾಗಿದ್ದವು. ನನ್ನ ಹಾಡುಗಳನ್ನು ನಟ ಸಾರ್ವಭೌಮರು, ಉದಯಶಂಕರು, ಯೋಗಾ ನರಸಿಂಹಪ್ಪ ತುಂಬಾ ಮೆಚ್ಚಿಕೊಂಡಿದ್ದರು ಅಂತ ಮೇಷ್ಟ್ರು ಆಗಾಗ ಹೇಳುತ್ತಿದ್ದರು.

***

'ಮೇಷ್ಟ್ರೇ, ಅಂಗ್ಡಿ ಸಿವಣ್ಣ ನಿಮ್ಮನ್ನ ಕರಕಂಡ್ ಬಾ ಅಂದ. ಬಾಬಣ್ಣಾರ ಮನೆಯಲ್ಲಿ ಏನೊ ಮೀಟಿಂಗಂತೆ. ಬರ್ರಿ ಸಾ ನನ್ನ ಬೈಕಲ್ಲೇ ಓಗನ...' ಅಂತ ಹುಡುಗನೊಬ್ಬ ಬಂದು ಕರೆದಾಗ ಅದು ನಾಟಕದ ಮೀಟಿಂಗು ಅಂತ ಮೇಷ್ಟ್ರಿಗೆ ಖಚಿತವಾಯಿತು. ಬಾಬಣ್ಣನ ಮನೆಯಂಗಳದಲ್ಲಿ ಕೂತಿದ್ದವರು ಮೇಷ್ಟ್ರು ಬರುತ್ತಿದ್ದಂತೆ ಎದ್ದು ನಿಂತು ಕೈಮುಗಿದರು. ಮೂರ್ಕಣ್ಣಪ್ಪನ ಮಗ ತಿಮ್ಮರಾಯಿ, ಅಳಿಯ ಮಾಲಿಂಗಪ್ಪ, ಹಿಂದೆ ಶನಿದೇವರ ಪಾತ್ರ ಮಾಡುತ್ತಿದ್ದ ನೀಲಕಂಠಾಚಾರಿ, ಇಸ್ಪೀಟ್ ರಾಜಣ್ಣ, ನಾಟಕದ